ಹುಡಗಿ ಅಲ್ಲ ಅವ್ವಾ... ಭಾಳ ತಿಳವಳಿಕಿ ಅದ ಅಕಿಗೆ. ಶಾಣ್ಯಾನೂ ಇದ್ದಾಳ. ಈಗಂತೂ, ಚಿನ್ನೂ ಸೋನೂ ಇಬ್ಬರ್ನೂ ಸಂಭಾಳ್ಸಕೊಂಡು ಮನಿ ಕೆಲ್ಸಾ ಎಲ್ಲಾ ತೂಗಿಸ್ಕೊಂಡು ಹೋಗ್ತಾಳ. ಟೈಮ್ ಸಿಕ್ಕಾಗ, ರಂಗೋಲಿ, ಕಸೂತಿ ಅಂತ ಏನರ ಮಾಡಕೋತ ಕೂತಿರತಾಳ. ನನ್ನ ಕಡಿಂದ ಇಷ್ಟು ಓದು ಬರಹಾ ಕಲ್ಸಿಕೊಂಡಾಳ. ಅಕಿದೊಂದು ಎಸ್ಸೆಸ್ಸೆಲ್ಸಿ ಮಾಡ್ಸೂದದ ನನಗ. ಅದೊಂದ ಆದ ಮ್ಯಾಲೆ, ಅಲ್ಲೇ ಎಲ್ಲರ ನೋಡಿ ಮದಿವಿ ಮಾಡೂಣ ಅಂತ ಹೇಳೇನಿ ಬಾಳಣ್ಣಗ... ಅಕಿ ಇದ್ದಾಳ ಅಂತ, ನಾನು ಶಿಶಿರ್ ಇಬ್ರೂ ನಿಶ್ಚಿಂತಿಯಿಂದ ನೌಕರಿ ಮಾಡಲಿಕತ್ತೇವಿ... ಇನ್ನ ನಿನ್ನ ಅಳ್ಯಾ ನನಕಿಂತಾ ಮದಲ ಮನಿ ಬಿಟ್ಟು, ನಾ ಬಂದಮ್ಯಾಲ ಬರತಾನ... ಬೆಂಕಿ ಬೆಣ್ಣೆ ಪ್ರಶ್ನೀನ ಇಲ್ಲಾ... ಅಂದಿದ್ದೆ... ಆದರ...' ಶಿರೀನ್ ಮಗ್ಗಲು ಬದಲಿಸಿದಳು. ಏನೇನೊ ವಿಚಾರಗಳು, ಹಿಂದೆಂದೂ ಮೂಡದ ಸಂಶಯಗಳು ನಿದ್ದೆಯನ್ನು ಹತ್ತಿರ ಸುಳಿಯಗೊಡುತ್ತಿಲ್ಲ. 'ಮುಂಜಾನೆ ರಾಜೂ, ಗೌರಿ ಅಪ್ಪಾ ಅವ್ವನ್ನ ಕರಕೊಂಡ ಬರ್ತಾನ... ಮುಂದೇನ್ಮಾಡೂದಂತ ನೋಡೂಣ. ಎಲ್ಲಾ ಸುಸೂತ್ರ ಬಗಿಹರದ್ರ ಸಾಕು... ಆದ್ರ ಗೌರಿ ಇಲ್ಲಂದ್ರ ಮನೀದ್ಯಾ್ಯಂಗ... ಈಗ ಚಿನ್ನೂ ಸೋನೂ ಇಬ್ಬರ್ದೂ ಸಾಲೀನೂ ಇಲ್ಲಾ... ಶಿಶಿರ್ ಖೋಲೀನ ಆಫೀಸ್ ಮಾಡಿಕೊಂಡು ಬಾಗಲಾ ಬಿಕ್ಕೊಂಡ ಕೂತಿರತಾನ... ಇನ್ನ ಮಾವನೋರು, ಎರಡ ದಿವಸಕ್ಕಂತ ಊರಿನಿಂದ ಬಂದವ್ರು ಇಲ್ಲೇ ಸಿಕ್ಕೊಂಡ ಕೂತಾರ... ಅತ್ತೆವ್ವು ಹೋದಮ್ಯಾಲೆ ಒಂಟಿ ಆಗಿ, ತಮ್ದು ಕೈ ತಮ್ದು ಬಾಯಿ ಆಗಿ, ಹೊಲಾ ಮನಿ ಅಂತ ಊರಿಗೆ ಅಂಟಿಗೊಂಡ ಕೂತವ್ರು... ಅವರಿಗೆ ಹ್ಯಾಂಗ ಏನರ ಕೆಲಸಾ ಹಚ್ಚೂದು?... ನನಗರ ಹೊರಗಿನ ದುಡತಾ... ಒಮ್ಮೆ ಬೆಳಗಾದ್ರ ಸಾಕಪಾ ದೇವ್ರು...' ಎಂದು ಕತ್ತಲಲ್ಲೇ ದೇವರಿಗೆ ಕೈ ಮುಗಿದಳು.

'ನೀನೂ ನಿದ್ದಿ ಮಾಡವಲ್ಲಿ, ನನಗೂ ಮಾಡಲಿಕ್ಕೆ ಬಿಡವಲ್ಲಿ... ನಾಳೆ ಸಂಡೆ ಅದ. ನೋಡೂಣ ಏನ ಮಾಡೂದಂತ... ಹುಡಕೂಣ ಗೌರಿನ್ನ...' ಎನ್ನುತ್ತ ಶಿಶಿರ ಬೆನ್ನು ತಿರುವಿದ್ದನ್ನು ಕಂಡು, ಶಿರೀನ್ ಮತ್ತಷ್ಟು ಚಿಂತಿತಳಾದಳು. ಯಾಕೆ ಶಿಶಿರ ಈ ವಿಷಯವನ್ನು ಸೀರಿಯಸ್ಸಾಗಿ ತೆಗೆದುಕೊಳ್ಳುತ್ತಿಲ್ಲ? ಹರೆಯದ ಹುಡುಗಿಯೊಬ್ಬಳು ಸಂಜೆಯಿಂದ ರಾತ್ರಿಇಡೀ ಕಾಣೆಯಾಗಿದ್ದಾಳೆನ್ನುವುದು ಇಷ್ಟು ಸರಳ ವಿಷಯವೆ? ಗೌರಿ ತಾನಾಗಿಯೇ ವೀರೇಶನೊಡನೆ ಹೋಗಿದ್ದಾಳೆಯೆ? ಅಥವಾ... ವೀರೇಶ ಅವಳನ್ನು ಮೋಸದಿಂದ ಕರೆದೊಯ್ದು?... ನಿನ್ನೆ ರಾತ್ರಿ ಕೇಳಿದಾಗ, ಶಿಶಿರ್‌ನ ಪೊಲೀಸ್ ಇನ್‌ಸ್ಪೆಕ್ಟರ್ ಗೆಳೆಯನ ಸಲಹೆಯೂ, ಅವಳು ತನ್ನ ಮರ್ಜಿಯಿಂದ ಹೋಗಿದ್ದಾಳೇನೊ... ಬೆಳಗಿನ ವರೆಗೆ ಕಾಯಿರಿ ಎಂಬುದೇ ಆಗಿತ್ತಲ್ಲ?... ಒಂದು ರಾತ್ರಿಯಲ್ಲಿ ಏನೆಲ್ಲ ಆಗಿಬಿಡಬಹುದು ಎಂಬುದನ್ನೇಕೆ ಈ ಗಂಡಸರು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ? ಅಕಸ್ಮಾತ್, ನಮ್ಮ ಸೋನೂ ಮುಂದೊಮ್ಮೆ ಈ ರೀತಿ ಗಾಯಬ್ ಆದರೆ, ಶಿಶಿರ ನಿದ್ದೆಯ ವಿಚಾರ ಮಾಡುತ್ತಾನೆಯೆ?... ಇನ್ನೂ ಹಾಸಿಗೆಯಲ್ಲಿ ಉರುಳಿಕೊಂಡಿರುವುದು ಸಾಧ್ಯವಾಗದೇ ಹೊರಬಂದು ಬಾಗಿಲೆಳೆದುಕೊಂಡವಳಿಗೆ, ಮತ್ತೊಂದು ಕೋಣೆಯಿಂದ ಮಾವನ ನಿರಾಳ ಗೊರಕೆ ಕೇಳಿ ಮತ್ತಿಷ್ಟು ಕಸಿವಿಸಿಯಾಯಿತು. ಅವರಂತೂ ಸಂಜೆಯಿಂದ ಒಂದು ಮಾತೂ ಆಡಿಲ್ಲ...

ಬಿಸಿ ಚಹಾದ ಮಗ್ ಹಿಡಿದು, ನೋಯುವ ತಲೆ ನೇವರಿಸಿಕೊಳ್ಳುತ್ತ ಬೆಳಗಾಗುವುದನ್ನೇ ಕಾಯುತ್ತ ಕುಳಿತಳು ಶಿರೀನ್. ಆರು ಗಂಟೆಗೆ, 'ಅಕ್ಕಾ, ಕಾರಿನಾಗ ಹೊಂಟೇವಿ. ತಾಸನ್ಯಾಗ ಮನ್ಯಾಗಿರತೇವಿ. ಬಾಳಣ್ಣನೂ ಜೋಡಿ ಇದ್ದಾನ' ಎಂದು ರಾಜು ಹೇಳಿದ ಮೇಲೆ ಶಿರೀನ್ ಮೇಲೆದ್ದಳು. ಯಾಂತ್ರಿಕವಾಗಿ ಬೆಳಗಿನ ಕೆಲಸ ಮಾಡುತ್ತಿದ್ದರೂ, ತಲೆಯಲ್ಲಿ ಮತ್ತದೇ ವಿಚಾರಗಳ ತಾಕಲಾಟ. ಗೌರಿ ಹೀಗೆ ಮಾಡಿದ್ದಾದರೂ ಏಕೆ? ಮುಂದೆ ಏನೇನಾಗುವುದೊ? ಸದ್ಯಕ್ಕೆ ಬಾಳಣ್ಣನನ್ನು ಎದುರಿಸುವುದು ಹೇಗೆ? ಒಲೆ ಮೇಲೆ ಬಾಣಲಿಯಲ್ಲಿ ಉಪ್ಪಿಟ್ಟಿನ ಎಸರು ಕುದಿಯುತ್ತಿತ್ತು.

ಬೀದಿಯ ಕೊನೆಯಿಂದ ಬರುತ್ತಿರುವವರು ಗೌರಿ ಮತ್ತು ವೀರೇಶ ಎನ್ನುವುದು ಕಿಟಕಿಯಿಂದ